ಅಸಲು ದಾವಾ ಸಂಖ್ಯೆ **110 – 2020** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **12.07.2023.**

ಪಾಟೀ ಸವಾಲು ಃ ಶ್ರೀ ಎಂ.ಇ.ಹೆಚ್ ನ್ಯಾಯಾವಾದಿಗಳಿಂದಃ

ದಾವಾ ಆಸ್ತಿಯು ಮೂಲತಹ 1 ನೆ ಪ್ರತಿವಾದಿಗೆ ಸೇರಿತ್ತು. 1 ನೇ ಪ್ರತಿವಾದಿಯಿಂದ ದಾವಾ ಆಸ್ತಿಯನ್ನು ರತ್ನಮ್ಮ ರವರ ಗಂಡ ನಿಂಗರಾಜು ರವರು ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯು ರತ್ನಮ್ಮರವರಿಗೆ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಸಾಕ್ಷಿಯು ದಾವಾ ಆಸ್ತಿಯು ರತ್ನಮ್ಮರವರಿಗೆ ಅವರ ಗಂಡನಿಂದ ಪೌತಿ ಮೇರೆಗೆ ವರ್ಗಾವಣೆಯಾಗಿರುವುದಾಗಿ ನುಡಿಯುತ್ತಾರೆ. ಸದರಿ ಲಿಂಗರಾಜುರವರು 1 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂದಿಸಿದಂತೆ ನೋಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುವುದು ನನಗೆ ಗೊತ್ತಿಲ್ಲ.ಸದರಿ ಕ್ರಯದ ಕರಾರು ಪತ್ರಕ್ಕೆ ಸಂಬಂದಿಸಿದಂತೆ 1 ನೇ ಪ್ರತಿವಾದಿಯು ರತ್ನಮ್ಮರವರ ವಿರುದ್ದ ಅಸಲು ದಾವಾ ಸಂಖ್ಯೆ 95/2020 ರಂತೆ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ನನ್ನನ್ನು ಸಹ 1 ನೇ ಪ್ರತಿವಾದಿಯಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ಸಲ್ಲಿಸುವ ಮೊದಲೆ ನಾನು ಈ ದಾವೆಯನ್ನ ಸಲ್ಲಿಸಿರುತ್ತೇನೆ. ರತ್ನಮ್ಮರವರು ನಮಗೆ ಕ್ರಯ ಪತ್ರವನ್ನು ಬರೆದುಕೊಡುವ ಮುಂಚೆ ಅವರ ಗಂಡ ಲಿಂಗರಾಜು ಕಾಣೆಯಾಗಿದ್ದಾರೆಂದು ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ರತ್ನಮ್ಮ ಮತ್ತು ಅವರ ಮಕ್ಕಳು ಲಿಂಗರಾಜುರವರ ಮರಣದ ಘೊಷಣೆಗಾಗಿ ದಾವೆಯನ್ನು ಸಲ್ಲಿಸಿರುವುದು ನನಗೆ ಗೊತ್ತಿಲ್ಲ. ಆಸ್ತಿಗಳ ಖಾತೆಯನ್ನು ಲಿಂಗರಾಜುರವರ ಹೆಸರಿನಿಂದ ತಮ್ಮ ಹೆಸರಿಗೆ ಮಾಡಿಸಿಕೊಳ್ಳುವ ಸಲುವಾಗಿ ಮರಣದ ಘೋಷಣೆ ದಾವೆಯನ್ನು ಎಲ್ಲೂ ಸಹ ಹೇಳಿಕೊಂಡಿಲ್ಲದಿರುವುದು ನನಗೆ ಗೊತ್ತಿಲ್ಲ. ಆಸ್ತಿಗಳ ಮೇಲೆ ರತ್ನಮ್ಮರವರಿಗೆ ಹಕ್ಕು ಇಲ್ಲದಿದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುವುದು ನನಗೆ ಗೊತ್ತಿಲ್ಲ. ನಾನು ಮತ್ತು ರತ್ನಮ್ಮರವರು ಸೇರಿಕೊಂಡು ನಿಪಿ-1 ನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಸ್ವಚ್ಚಗೊಳಿಸುವಾಗ ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ಮನೆ ನಿರ್ಮಿಸಲು ಪರವಾನಗಿಯನ್ನು

ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ 3 ಅಡಿ ಅಗಲದ ಚರಂಡಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು ಹೂವಿನ ಗಿಡಿಗಳನ್ನು ಬೆಳೆಸಿರುತ್ತೇನೆ. ದಾವಾ ಆಸ್ತಿಯನ್ನು ಖರೀದಿಸುವಾಗ ದಾವಾ ಆಸ್ತಿಯನ್ನು ಅಳತೆ ಮಾಡಿಸಿರುತ್ತೇವೆ. ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಖಾಲಿ ಜಾಗವಿರುತ್ತದೆ ಎಂದರೆ ಸರಿ . ದಾವಾ ಆಸ್ತಿಯು ಚರಂಡಿಯನ್ನು ಒಳಗೊಂಡು 33 ಅಡಿ ಇದೆಯೋ ಅಥವಾ ಅದನ್ನು ಬಿಟ್ಟು 33 ಅಡಿ ಇದೆಯೋ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ದಾವಾ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನ ಮತ್ತು ರತ್ನಮ್ಮರವರ ವಿರುದ್ಧ ಅಸಲು ದಾವಾ ಸಂಖ್ಯೆ 95/2020 ರಂತೆ ದಾವೆಯನ್ನು ಸಲ್ಲಿಸಿದ ಕಾರಣಕ್ಕಾಗಿ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ರಲ್ಲಿ ದಾವಾ ಆಸ್ತಿಯ ಪೂರ್ವ ಪಶ್ಚಿಮ ಮತ್ತು ದಕ್ಷಿಣ ಉತ್ತರ ಎಷ್ಟು ವಿಸ್ತೀರ್ಣ ಇದೆ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ಚಕ್ಕುಬಂದಿಯು ಸಹ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ-9 ರಲ್ಲಿ ಚರಂಡಿಯ ನಂತರ ಇರುವುದು 1 ನೇ ಪ್ರತಿವಾದಿಯ ನಿವೇಶನ ಮತ್ತು ಮನೆಯಾಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆಯಾಗಿರುವುದಾಗಿ ನುಡಿಯುತ್ತಾರೆ. ನಿಪಿ-9 ರಲ್ಲಿ ಕಾಣುತ್ತಿರುವ ಕಾಂಪೌಂಡ್ ಗೋಡೆಯು ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಇರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಮನೆ ಇದ್ದು, ನಮ್ಮ ದಾವಾ ಆಸ್ತಿ ಮತ್ತು 1 ನೇ ಪ್ರತಿವಾದಿಯ ಮನೆಯ ನಡುವೆ ಏನು ಇರುವುದಿಲ್ಲ.

ಮುಂದುವರಿದ ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ